## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 17-12-2022

### ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 117/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ 31/07/2022 ರಂದು 1800 ಗಂಟೆಗೆ ಪಿ.ಐ. ರವರು ಠಾಣೆಯಲ್ಲಿದ್ದಾಗ ಗೋರನಳ್ಳಿ ಗ್ರಾಮದ ರುದ್ರ ಭೂಮಿ ಹತ್ತಿರ ಸಾರ್ವಜನಿಕ ಖುಲ್ಲಾ ಸ್ಥಳದಲ್ಲಿ ಸುಮಾರು 4-5 ಜನ ಕೂಡಿಕೊಂಡು ಹಣ ಹಚ್ಚಿ, ಪಣ ತೊಟ್ಟು ಅಂದರ್ ಬಾಹರ್ ನಸೀಬಿನ ಜೂಜಾಟ(ಇಸ್ಪೀಟ್) ಆಡುತ್ತಿದ್ದಾರೆ ಅಂತ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ರುದ್ರ ಭೂಮಿ ಹತ್ತಿರ ಸಾರ್ವಜನಿಕ ಖುಲ್ಲಾ ಸ್ಥಳದಲ್ಲಿ ಬೀದಿ ದೀಪದ ಬೆಳಕಿನಲ್ಲಿ 05 ಜನರು ಗುಂಪಾಗಿ ನೆಲದ ಮೇಲೆ ಕುಳಿತು ಇಸ್ಪೀಟ್ ಎಲೆಗಳಿಂದ ಹಣ ಹಚ್ಚಿ ಪಣತೊಟ್ಟು ಅಂದರ ಬಾಹರ ಎನ್ನುವ ನಸಿಬಿನ್ ಜೂಜಾಟ ಆಡುತ್ತಿದ್ದುದ್ದನ್ನು ನೋಡಿ ಖಚಿತ ಪಡಿಸಿಕೊಂಡು ದಾಳಿ ಮಾಡಿ ಜೂಜಾಟ ಆಡುತ್ತಿದ್ದ ಎಲ್ಲಾ 05 ಜನರಿಗೆ ಹಿಡಿದುಕೊಂಡಿದ್ದು ಇರುತ್ತದೆ. ನಂತರ ಪಂಚರ ಸಮಕ್ಷಮ ಹಿಡಿದುಕೊಂಡ ಜೂಜಾಟವಾಡುತ್ತಿದ್ದ ಜನರಿಗೆ ಅವರ ಹೆಸರು ವಿಳಾಸ ವಿಚಾರಣೆ ಮಾಡಿ ಅಂಗ ಝಡ್ತಿ ಮಾಡಿ ನೋಡಲು 1] ಅನೀಲ್‌ರೆಡ್ಡಿ ತಂದೆ ರಾಮಚಂದ್ರರೆಡ್ಡಿ, ವಯಸ್ಸು: 46 ವರ್ಷ, ಜಾತಿ: ರೆಡ್ಡಿ, ಉದ್ಯೋಗ: ಒಕ್ಕಲುತನ ಕೆಲಸ, ಸಾ: ಗೋರನಳ್ಳಿ ಗ್ರಾಮ, ತಾ: ಬೀದರ ಅಂತ ತಿಳಿಸಿದ್ದು ಈತನ ಹತ್ತಿರ 800/-ರೂ ನಗದು ಹಣ ಇದ್ದವು, 2] ಜಗನಾಥ ತಂದೆ ಚಂದ್ರಪ್ಪಾ ಅರಜಗೊಂಡಾ, ವಯಸ್ಸು: 33 ವರ್ಷ, ಜಾತಿ: ಕುರುಬ, ಉದ್ಯೋಗ: ಚಾಲಕ, ಸಾ: ಗೋರನಳ್ಳಿ ಗ್ರಾಮ, ತಾ: ಬೀದರ. ಅಂತ ತಿಳಿಸಿದ್ದು ಈತನ ಹತ್ತಿರ 800/-ರೂ ನಗದು ಹಣ ಇದ್ದವು, 3] ಗಣಪತಿ ತಂದೆ ಸಿದ್ರಾಮ ಹಳೆಂಬುರ್, ವಯಸ್ಸು: 42 ವರ್ಷ, ಜಾತಿ: ಕುರುಬ, ಉದ್ಯೋಗ: ಕೂಲಿ ಕೆಲಸ, ಸಾ: ಗೋರನಳ್ಳಿ ಗ್ರಾಮ, ತಾ: ಬೀದರ ಅಂತ ತಿಳಿಸಿದ್ದು ಈತನ ಹತ್ತಿರ 900/-ರೂ ನಗದು ಹಣ ಇದ್ದವು, 4] ಸುರೇಶ ತಂದೆ ನಾಗಣ್ಣ ಗಾದಗಿದೊವರು, ವಯಸ್ಸು: 33 ವರ್ಷ, ಜಾತಿ: ಕುರುಬ, ಉದ್ಯೋಗ: ಕೂಲಿ ಕೆಲಸ, ಸಾ: ಗೋರನಳ್ಳಿ ಗ್ರಾಮ, ತಾ: ಬೀದರ ಅಂತ ತಿಳಿಸಿದ್ದು ಈತನ ಹತ್ತಿರ 1000/-ರೂ ನಗದು ಹಣ ಇದ್ದವು, 5] ಓಂಕಾರ ತಂದೆ ಸಿದ್ರಾಮ ತೆಲಗುದೊಡ್ಡಿ, ವಯಸ್ಸು: 41 ವರ್ಷ, ಜಾತಿ: ಎಸ್‌ಸಿ (ಹೊಲೆಯಾ), ಉದ್ಯೋಗ: ಸೆಂಟ್ರಿಂಗ್ ಕೆಲಸ, ಸಾ: ಗೋರನಳ್ಳಿ ಗ್ರಾಮ, ತಾ: ಬೀದರ ಅಂತ ತಿಳಿಸಿದ್ದು ಈತನ ಹತ್ತಿರ ರೂ. 900/- ರೂ ನಗದು ಹಣ ಇದ್ದವು, ನಂತರ ಎಲ್ಲರ ಮಧ್ಯೆ ಇರುವ ಸ್ಥಳ ಪರಿಶೀಲಿಸಿ ನೋಡಲು ಎಲ್ಲರ ಮದ್ಯ ರೂ. 800/- ಹಾಗೂ 52 ಇಸ್ಪೇಟ ಎಲೆಗಳು ಇದ್ದವು ಹೀಗೆ ಜೂಜಾಟದಲ್ಲಿ ತೊಡಗಿಸಿದ್ದ ಒಟ್ಟು ರೂ. 5200/- ನಗದು ಹಣ ಹಾಗೂ 52 ಇಸ್ಪೇಟ ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.